

# ಬಿ.ವಿ.ಹಂಸಕುಮಾರಿ, ಎಂ.ಎ(ರಾಜ್ಯಶಾಸ್ತ್ರ)

## 1. ವೈಯಕ್ತಿಕ ವಿವರ

| | | |
|---|---|---|
| ಹೆಸರು | : | ಬಿ. ವಿ. ಹಂಸಕುಮಾರಿ |
| ಜನ್ಮ ದಿನಾಂಕ | : | 21 ಏಪ್ರಿಲ್ 1980 |
| ವಿದ್ಯಾರ್ಹತೆ | : | ಎಂ.ಎ (ರಾಜ್ಯಶಾಸ್ತ್ರ)., |
| ವೃತ್ತಿಪರ ವಿದ್ಯಾರ್ಹತೆ | : | ಪಿ.ಜಿ.ಡಿ.ಬಿ.ಎ (ವ್ಯವಹಾರ ಆಡಳಿತ)., |
| ಕಂಪ್ಯೂಟರ್ ಜ್ಞಾನ | : | Basics like MS Office, Internet. etc |
| ಭಾಷಾ ಜ್ಞಾನ | : | ಕನ್ನಡ, ಇಂಗ್ಲೀಷ್, ಹಿಂದಿ |
| ವೃತ್ತಿ | : | ಮಾಜಿ ಅಧ್ಯಕ್ಷರು, ರಾಮನಗರ ಜಿಲ್ಲಾ ಪಂಚಾಯಿತಿ<br>(30.08.2012 – 16.10.2012) |
| ಹವ್ಯಾಸ | : | ಪತ್ರಿಕೆ ಓದುವುದು, ಟಿ.ವಿ. ನೋಡುವುದು<br>ಸಂಗೀತ ಕೇಳುವುದು, ವೆಬ್ ಬ್ರೌಸಿಂಗ್ ಇತ್ಯಾದಿ |
| ಇಷ್ಟ | : | 'ದೇಶ ನೋಡು ಕೋಶ ಓದು' ಎಂಬ ಸಿದ್ಧಾಂತ |
| ಆಸೆ | : | ಭಾರತವನ್ನು ಬಡತನ ಮುಕ್ತ ಮತ್ತು<br>ಪೂರ್ಣ ಸಾಕ್ಷರ ದೇಶವನ್ನಾಗಿ ನೋಡುವುದು. |
| ಆಸಕ್ತಿ | : | ಸಮಾಜ ಸೇವೆ |
| ಸ್ಫೂರ್ತಿ | : | ನನ್ನ ತಂದೆ ವೀರಪ್ಪನವರು |
| ಪ್ರೋತ್ಸಾಹ | : | 1. ಶಾಸಕ ಹೆಚ್.ಸಿ.ಬಾಲಕೃಷ್ಣರವರು ಮತ್ತು<br>2. ನನ್ನ ಪತಿ ಕೋಟಪ್ಪನವರು |
| ನನ್ನ ನೆಚ್ಚಿನ ನಾಯಕರು ಮತ್ತು ಅವರ ದೃಷ್ಟಿಕೋನ | : | 1. ಮಹಾತ್ಮ ಗಾಂಧಿ ಮತ್ತು ಅವರ ಗ್ರಾಮ ಸ್ವರಾಜ್ ಪರಿಕಲ್ಪನೆ<br>2. ಹೆಚ್.ಡಿ.ಕುಮಾರಸ್ವಾಮಿ ಮತ್ತು ಅವರ ಗ್ರಾಮ ವಾಸ್ತವ್ಯ |
| ಖಾಯಂ ವಿಳಾಸ | : | ಕಳ್ಳಿಪಾಳ್ಯ, ಮಾದಿಗೊಂಡನಹಳ್ಳಿ ದಾಖಲೆ,<br>ಕುದೂರು ಹೋಬಳಿ, ಮಾಗಡಿ ತಾಲ್ಲೂಕು,<br>ರಾಮನಗರ ಜಿಲ್ಲೆ–562127. |
| ಅಂಚೆ ವಿಳಾಸ | : | ನಂ.509, 12ನೇ ಮುಖ್ಯರಸ್ತೆ, ಎಂ.ಎಸ್.ರಾಮಯ್ಯ ಲೇಔಟ್,<br>ನಾಗಸಂದ್ರ ಅಂಚೆ, ಬೆಂಗಳೂರು – 560 073. |

## 2. ಕುಟುಂಬದ ವಿವರ

| | | |
|---|---|---|
| ತಂದೆ | : | ವೀರಪ್ಪ |
| ರಾಜಕೀಯ ಅನುಭವ | : | ಕಳೆದ 40 ವರ್ಷಗಳಿಂದ ರಾಜಕೀಯ ಕ್ಷೇತ್ರದಲ್ಲಿರುವ ನನ್ನ ತಂದೆ ಸಮಾಜ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. 'ಯಜಮಾನ್ ವೀರಪ್ಪ' ಎಂದು ಖ್ಯಾತನಾಮರಾಗಿರುವ ಇವರು ಈ ಹಿಂದೆ ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಉದ್ಯೋಗದಲ್ಲಿದ್ದು ಸ್ವಯಂ ನಿವೃತ್ತಿ ಪಡೆದಿದ್ದಾರೆ. ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿದ್ದಾಗ ರಾಜ್ಯ ಸರ್ಕಾರಿ ನೌಕರರ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಎರಡು ಬಾರಿ ಲೋಕಸಭಾ ಚುನಾವಣೆಗೆ ಸ್ವತಂತ್ರವಾಗಿ ಸ್ಪರ್ಧಿಸಿದ್ದ ಇವರು ಅವಿಭಜಿತ ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಪಂಚಾಯಿತಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಮಾಜಿ ಸಚಿವ ಮಾಗಡಿ ಕ್ಷೇತ್ರದ ದಿವಂಗತ ಹೆಚ್.ಜಿ.ಚೆನ್ನಪ್ಪ ನವರ ಒಡನಾಡಿಯಾಗಿದ್ದ ಇವರು ಸದ್ಯ ಸಮಾಜಸೇವೆಯ ಜೊತೆಗೆ ಜಾತ್ಯಾತೀತ ಜನತಾದಳ ಪಕ್ಷದಲ್ಲಿ ಸಕ್ರಿಯ ರಾಜಕಾರಣಿಯಾಗಿದ್ದಾರೆ. |
| ತಾಯಿ | : | ಶಾಂತಕುಮಾರಿ.ಹೆಚ್ |
| ವೃತ್ತಿ | : | ಗೃಹಿಣಿ |
| ವಿವಾಹ ದಿನಾಂಕ | : | 8 ಜುಲೈ 2002 |
| ಪತಿ | : | ಕೋಟಪ್ಪ |
| ವೃತ್ತಿ | : | ತೆಹಲ್ಕಾ.ಕಾಂ ನಲ್ಲಿ ಇದ್ದ ಇವರು ಈಗ ಆದಿತ್ಯ ಬಿಲ್ಡರ್ಸ್ ಅಂಡ್ ಡೆವಲಪರ್ಸ್ ಸಂಸ್ಥೆಗೆ ಪಾಲುದಾರರಾಗಿದ್ದಾರೆ. ಹವ್ಯಾಸಿ ಬರಹಗಾರರು ಮತ್ತು ಕವಿಗಳಾಗಿರುವ ಇವರು 'ನಾ ಬರೆದ ಚಿತ್ತಾರ' ಕವನ ಸಂಕಲನವನ್ನು ಹೊರತಂದಿದ್ದಾರೆ. ಡಿ.ಎಂ.ಇ., ಎಂ.ಎ., ಪಿ.ಜಿ.ಡಿ.ಹೆಚ್.ಇ., ವಿದ್ಯಾರ್ಹತೆ ಹೊಂದಿರುವ ನನ್ನ ಪತಿ ನನ್ನ ರಾಜಕೀಯ ಜೀವನಕ್ಕೆ ಸಂಪೂರ್ಣ ನೆರವಾಗುತ್ತಿದ್ದಾರೆ. |
| ಮಗಳು | : | ಧ್ಯಾನ.ಹೆಚ್.ಕೆ<br>6 ವರ್ಷದ ಒಬ್ಬಳೇ ಮಗಳಿದ್ದು ಒಂದನೇ ತರಗತಿಯಲ್ಲಿ ಓದುತ್ತಿದ್ದಾಳೆ. |
| ಸಹೋದರಿಯರು | : | ನನಗೆ ಇಬ್ಬರು ಕಿರಿಯ ಸಹೋದರಿಯರಿದ್ದಾರೆ.<br>1. ಬಿ.ವಿ. ತಾರಾದೇವಿ<br>2. ಡಾ॥ ಬಿ.ವಿ. ಗುಣಶೀಲ, |

## 3. ರಾಜಕೀಯ ಹಿನ್ನೆಲೆ :

ನಾನು ಚಿಕ್ಕಂದಿನಿಂದಲೂ ನನ್ನ ತಂದೆಯ ರಾಜಕಾರಣವನ್ನು ನೋಡಿದವಳು. ಅವರು 1984 ರಲ್ಲಿ ಪಿ.ಡಬ್ಲ್ಯೂ.ಡಿ ಯಲ್ಲಿ ನೌಕರಿಯಲ್ಲಿದ್ದಾಗ ಕರ್ನಾಟಕ ರಾಜ್ಯ ನೌಕರರ ಪರಿಷತ್ ಗೆ ಎರಡು ಬಾರಿ ಅಧ್ಯಕ್ಷರಾಗಿದ್ದರು. ಈ ಹಿಂದೆ ಮಾಜಿ ಸಚಿವ ದಿವಂಗತ ಹುಲಿಕಟ್ಟೆ ಹೆಚ್.ಜಿ.ಚನ್ನಪ್ಪನವರ ಜೊತೆಯಲ್ಲಿ ಸಕ್ರಿಯ ರಾಜಕಾರಣದಲ್ಲಿ ಭಾಗವಹಿಸಿದ್ದರು ಮತ್ತು ಅವರ ಒಡನಾಡಿಯಾಗಿದ್ದರು.
ತಂದೆಯನ್ನು ಹೊರತುಪಡಿಸಿದಂತೆ ನಮ್ಮ ಕುಟುಂಬದ ಪೂರ್ವಜರಾರೂ ರಾಜಕೀಯ ವ್ಯಕ್ತಿಗಳಾಗಿರಲಿಲ್ಲ.

## 4. ರಾಜಕೀಯ ಪ್ರವೇಶ:

2006 ರಲ್ಲಿ ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು, ಕುದೂರು ಹೋಬಳಿಯ ಮಾದಿಗೊಂಡನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರಾಗಿದ್ದ ನನ್ನ ತಂದೆ ವೀರಪ್ಪನವರು ಕುದೂರು ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೆ ಆರಿಸಿ ಬಂದಾಗ. ಗ್ರಾಮ ಪಂಚಾಯಿತಿಯ ಸ್ಥಾನ ತೆರವಾಗಿ, ಆ ಸ್ಥಾನಕ್ಕೆ ಮತ್ತೆ ಚುನಾವಣಾ ನಡೆದಾಗ, ನಾನು ಸ್ಪರ್ಧಿಸಿ ಮೊದಲ ಬಾರಿಗೆ ಆಯ್ಕೆಯಾದೆ.

## 5. ರಾಜಕೀಯ ಅನುಭವ:

| | | |
|---|---|---|
| 2006 ಜುಲೈ 2 | : | ಮಾಗಡಿ ತಾಲ್ಲೂಕು ಮಾದಿಗೊಂಡನಹಳ್ಳಿ ಗ್ರಾಮ ಪಂಚಾಯ್ತಿ ಸದಸ್ಯೆಯಾಗಿ ಪ್ರಥಮ ಬಾರಿ ಆಯ್ಕೆ (ಮಾದಿಗೊಂಡನಹಳ್ಳಿ ಮತ್ತು ಕ್ಷೇತ್ರ) |
| 2007 ಅಕ್ಟೋಬರ್ 1 | : | ಮಾಗಡಿ ತಾಲ್ಲೂಕು ಮಾದಿಗೊಂಡನಹಳ್ಳಿ ಗ್ರಾಮ ಪಂಚಾಯ್ತಿ ಅಧ್ಯಕ್ಷೆಯಾಗಿ ಅವಿರೋಧ ಆಯ್ಕೆ. |
| 2010 ಮೇ 29 | : | ಮಾಗಡಿ ತಾಲ್ಲೂಕು, ಮಾದಿಗೊಂಡನಹಳ್ಳಿ ಗ್ರಾಮ ಪಂಚಾಯ್ತಿ ಸದಸ್ಯೆಯಾಗಿ ಎರಡನೇ ಬಾರಿ ಆಯ್ಕೆ (ಅರಶಿನಕುಂಟೆ ಮತ ಕ್ಷೇತ್ರ) |
| 2011 ಜನವರಿ 4 | : | ಮಾಗಡಿ ತಾಲ್ಲೂಕು ಕುದೂರು ಜಿಲ್ಲಾ ಪಂಚಾಯ್ತಿ ಕ್ಷೇತ್ರದಿಂದ ಮೂರನೇ ಬಾರಿ ಆಯ್ಕೆ. |
| 2011 ಫೆಬ್ರವರಿ 16 | : | ರಾಮನಗರ ಜಿಲ್ಲಾ ಪಂಚಾಯಿತಿ ಹಣಕಾಸು ಸ್ಥಾಯಿ ಸಮಿತಿ ಸದಸ್ಯೆ. |
| 2012 ಆಗಸ್ಟ್ 30 | : | ರಾಮನಗರ ಜಿಲ್ಲಾ ಪಂಚಾಯಿತಿ ಅಧ್ಯಕ್ಷೆಯಾಗಿ ಅವಿರೋಧ ಆಯ್ಕೆ. |